# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

**ನಸದೊ/ಸಾ.ಆ.ವಿ/ವಿ.ಸ.8/2008–09** **ದಿನಾಂಕ:16–02–2009**

## –:: ವಿಶೇಷ ಸಭೆ ನಡವಳಿಕೆಗಳು ::–

ದಿನಾಂಕ:16–02–2009ರಂದು ಸೋಮವಾರ ಬೆಳಿಗ್ಗೆ 11.00ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷರು ಮತ್ತು ನಗರಸಭೆಯ ಎಲ್ಲಾ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:–

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 29 | 02 | 31 |

ಮೊದಲಿಗೆ ನಗರಸಭೆಯ ಪೌರಾಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್‌ರವರು** ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಗರಸಭೆಯ ಎಲ್ಲಾ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿದರು, ಹಾಗೂ ಸ್ಥಾಯಿ ಸಮಿತಿಗೆ ನೂತವಾಗಿ ಆಯ್ಕೆಯಾಗಿರುವ **ಅಧ್ಯಕ್ಷರಾದ ಮಾನ್ಯ ಶ್ರೀ ಡಿ.ಎಂ.ಚಂದ್ರಶೇಖರ್ ರವರಿಗೆ** ಸಭೆಯಲ್ಲಿ ಸ್ವಾಗತಿಸಲಾಯಿತು. ನಂತರ ಮಾನ್ಯ ಅಧ್ಯಕ್ಷರನ್ನು ಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿದರು.

**ವಿಷಯ ಸಂಖ್ಯೆ:1**

ದೊಡ್ಡಬಳ್ಳಾಪುರ ನಗರದ ಹಳೇ ಬಸ್ ನಿಲ್ದಾಣವು ತುಂಬಾ ಕಿಷ್ಕಿಂದೆಯಾಗಿದ್ದು ಈ ನಿಲ್ದಾಣದಲ್ಲಿಯೇ ಖಾಸಗಿ ಬಸ್‌ಗಳು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ಗಳು ಹಾಗೂ ಆಟೋರಿಕ್ಷಾಗಳು ಸಹ ಈ ನಿಲ್ದಾಣದಲ್ಲಿಯೇ ಇರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತುಂಬಾ ಅನಾನುಕೂಲವಾಗಿರುವುದರಿಂದ ಹಳೇಬಸ್ ನಿಲ್ದಾಣವನ್ನು ನಗರವ್ಯಾಪ್ತಿಯಲ್ಲಿ ಸ್ಥಳಾಂತರಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿ ಶ್ರೀ ಎನ್.ಕೆ.ರಮೇಶ್, ಶ್ರೀ ಫಯಾಜ್ ಪಾಷ ಮತ್ತು ಶ್ರೀ ಡಿ.ಎಂ.ಚಂದ್ರಶೇಖರ್, ಸದಸ್ಯರವರು ಮಾತನಾಡಿ ಬಸ್‌ನಿಲ್ದಾಣ ಮತ್ತು ನೂತನ ಆಸ್ಪತ್ರೆಯನ್ನು ಐಯ್ಯಪ್ಪಸ್ವಾಮಿ ದೇವಸ್ಥಾನದ ಮುಂಭಾಗದ ನಾಗರಕೆರೆಯಲ್ಲಿ ನಿರ್ಮಿಸಲು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಹಾಗೂ ಶ್ರೀ ರಾಮಾಂಜಿನಪ್ಪ ಮತ್ತು ಶ್ರೀ ಕೆ.ಎಂ.ಹನುಮಂತರಾಯಪ್ಪ, ಸದಸ್ಯರು ಮಾತನಾಡಿ ಮೇಲ್ಕಂಡ ಸ್ಥಳದಲ್ಲಿಯೇ ಬಸ್‌ನಿಲ್ದಾಣ ಮತ್ತು ಆಸ್ಪತ್ರೆಗಳ ನಿರ್ಮಾಣಕ್ಕೆ ಸೂಕ್ತ ಸ್ಥಳವಾಗಿರುತ್ತದೆ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಕೆ.ಜಿ.ಚಂದ್ರಶೇಖರ್ ಸದಸ್ಯರು ಮಾತನಾಡಿ, ಕೆ.ಇ.ಬಿ. ವಸತಿ ಗೃಹದ ಪ್ರದೇಶವು ನಗರಸಭಾ ಸ್ವತ್ತಾಗಿರುವುದರಿಂದ ಆ ಪ್ರದೇಶವನ್ನು ನಗರಸಭೆಯ ಸುಭರ್ದಿಗೆ ಪಡೆದು ಬಸ್ ನಿಲ್ದಾಣವನ್ನು ನಿರ್ಮಿಸಲು ತಮ್ಮ ಸಲಹೆ ನೀಡಿದರು.

ಶ್ರೀ ಬಿ.ಜಿ.ಹೇಮಂತರಾಜು, ಸದಸ್ಯರು ಮಾತನಾಡಿ ಹಳೇಯ ಬಸ್ ನಿಲ್ದಾಣದಲ್ಲಿಯೇ ಕಿಷ್ಕಿಂದೆಯನ್ನು ನಿವಾರಿಸಿ, ಹಳೇ ಬಸ್‌ನಿಲ್ದಾಣವನ್ನು ಆ ಸ್ಥಳದಲ್ಲಿಯೇ ಮುಂದುವರೆಸಲು ಸೂಕ್ತವೆಂದು ಹಾಗೂ ನಾಗರಕೆರೆ ಮತ್ತು ಮುತ್ತೂರು ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಕೆರೆಗಳ ಅಭಿವೃದ್ಧಿಗೆ ಸರ್ಕಾರವು ಈಗಾಗಲೇ ಕ್ರಮ ಕೈಗೊಂಡಿದ್ದು, ನೀರಿನ ಅಭಿವೃದ್ಧಿಗೆ ಕೆರೆಗಳನ್ನು ಉಳಿಸಿಕೊಳ್ಳುವಂತೆ, ಬಸ್ ನಿಲ್ದಾಣ ಹಾಗೂ ಆಸ್ಪತ್ರೆ ನಿರ್ಮಾಣಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು.

ಶ್ರೀ ಕೆ.ಎಂ.ಹನುಮಂತರಾಯಪ್ಪ, ಸದಸ್ಯರು ಮಾತನಾಡಿ, ನಾಗರಕೆರೆಯಲ್ಲಿ 15-20 ಎಕರೆ ಜಮೀನನ್ನು ತೆಗೆದುಕೊಂಡು ಬಸ್‌ನಿಲ್ದಾಣ ಹಾಗೂ ಆಸ್ಪತ್ರೆ ನಿರ್ಮಾಣ ಮಾಡಿದ್ದಲ್ಲಿ ಈ ಸ್ಥಳವು ರಾಷ್ಟ್ರೀಯ ಹೆದ್ದಾರಿಗೆ ಹಾಗೂ ನಗರಕ್ಕೆ ಹತ್ತಿರವಿರುವುದರಿಂದ ಈ ಸ್ಥಳ ಸೂಕ್ತವಾಗಿರುತ್ತದೆ ಎಂಬುದಾಗಿ ಮತ್ತೊಮ್ಮೆ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಶ್ರೀ ಆರ್. ರವಿಕುಮಾರ್, ಸದಸ್ಯರು ಮಾತನಾಡಿ, ಸರ್ವೆ ನಂ.25ರ ಆಸ್ತಿಯಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲು ತಮ್ಮ ಅಭಿಪ್ರಾಯವನ್ನು ಮಂಡಿಸಿದರು

ಶ್ರೀ ಮಲ್ಲಿಕಾರ್ಜುನ್, ಸದಸ್ಯರು ಮಾತನಾಡಿ, ಸರ್ಕಾರಿ ಸಾರಿಗೆ ಬಸ್‌ಗಳು ಹೊಸಬಸ್ ನಿಲ್ದಾಣಕ್ಕೆ ನಿಲುಗಡೆ ಮಾಡಿ, ಹಳೇ ಬಸ್‌ನಿಲ್ದಾಣದಲ್ಲಿ ಖಾಸಗೀ ಬಸ್‌ಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಲು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಶ್ರೀ ವಿ.ಎಸ್. ರವಿಕುಮಾರ್, ಸದಸ್ಯರು ಮಾತನಾಡಿ, ಲಗೇಜ್ ಗಾಡಿಗಳನ್ನು ಕೆರೆಕೋಡಿಗೆ ಸ್ಥಳಾಂತರಿಸಿ, ಹಳೇಬಸ್ ನಿಲ್ದಾಣವನ್ನು ಸದರಿ ಸ್ಥಳದಲ್ಲಿಯೇ ಉಳಿಸಿಕೊಳ್ಳುವಂತೆ ಮತ್ತು ಆಸ್ಪತ್ರೆಯನ್ನು ತೋಟಗಾರಿಕೆ ಇಲಾಖೆಯ ಜಾಗದಲ್ಲಿ ನಿರ್ಮಿಸಲು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಶ್ರೀ ಜಿ.ಎಸ್.ಸೋಮರುದ್ರಶರ್ಮ, ಉಪಾಧ್ಯಕ್ಷರು ಮಾತನಾಡಿ, ಹೈಟೆಕ್ ಶೌಚಾಲಯ ನಿರ್ಮಿಸಲು ಉದ್ದೇಶಿಸಿರುವುದರಿಂದ ಮಾನ್ಯ ಶಾಸಕರು, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ ರವರು ದೊಡ್ಡಬಳ್ಳಾಪುರ ಬಸ್‌ನಿಲ್ದಾಣವನ್ನು ವೀಕ್ಷಣೆ ಮಾಡುವ ಸಮಯದಲ್ಲಿ ತುಂಬಾ ಕಿಷ್ಕಿಂದೆಯಾಗಿರುವುದನ್ನು ನೋಡಿ, ಬಸ್‌ನಿಲ್ದಾಣ ಮತ್ತು ಆಸ್ಪತ್ರೆ ನಿರ್ಮಾಣಕ್ಕೆ ನಗರಸಭಾ ಸದಸ್ಯರು ಜಾಗವನ್ನು ಗುರ್ತಿಸಿದಲ್ಲಿ ಅವುಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸಲು ಕ್ರಮಕೈಗೊಳ್ಳಲಾಗುತ್ತದೆ ಎಂಬುದಾಗಿ ತಿಳಿಸಿರುವುದರಿಂದ, ನಗರದ ಬೇರೆ ಯಾವುದೇ ಜಾಗವು ಸೂಕ್ತವಾಗಿಲ್ಲದ ಕಾರಣ ಐಯ್ಯಸ್ವಾಮಿ ದೇವಸ್ಥಾನದ ಎದುರಗಡೆ ಇರುವ ಸರ್ಕಾರಿ ಜಾಗದಲ್ಲಿ ಬಸ್‌ನಿಲ್ದಾಣ ಮತ್ತು ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತವಾಗಿರುತ್ತದೆ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ತ.ನ.ಪ್ರಭುದೇವ್, ಸದಸ್ಯರು ಮಾತನಾಡಿ, 1950ರಲ್ಲಿ ಶ್ರೀ ಕೊಂಗಾಡಿಯಪ್ಪನವರು ಹಳೇ ಬಸ್ ನಿಲ್ದಾಣಕ್ಕೆ ಚಾಲನೆ ನೀಡಿದ್ದು, ದೊಡ್ಡಬಳ್ಳಾಪುರಕ್ಕೆ 1991-92ರಲ್ಲಿ ಬಸ್ ಡಿಪೋ ಆಗಬೇಕೆಂದು ಹೋರಾಟ ಮಾಡಿದ ಪ್ರತಿಫಲವಾಗಿ ಹೊಸಬಸ್ ನಿಲ್ದಾಣ ಹಾಗೂ ಬಸ್ ಡಿಪೋ ನಿರ್ಮಾಣವಾದರು, ಹಳೇಯ ಬಸ್ ನಿಲ್ದಾಣವನ್ನು ಇರುವ ಸ್ಥಳದಲ್ಲಿಯೇ ಉಳಿಸಿಕೊಳ್ಳಬೇಕೆಂದು ಎಲ್ಲರ ಬೇಡಿಕೆಯಾಗಿದ್ದು, ಅದರಂತೆ ಹಳೇಯ ಬಸ್‌ನಿಲ್ದಾಣವನ್ನು ಅಲ್ಲಿಯೇ ಉಳಿಸಿಕೊಳ್ಳಲಾಯಿತು. ಹಾಗೂ ಇತರೆ ಜಾಗಗಳನ್ನು ತೆರವುಗೊಳಿಸಿ ಬಸ್ ನಿಲ್ದಾಣವನ್ನು ವಿಸ್ತಾರ ಮಾಡಲು ಪ್ರಸನ್ನ ಚಿತ್ರಮಂದಿರದ ಎದುರು ತಳ್ಳುವ ಹಾಗೂ ಇತರೆ ಗಾಡಿಗೆಗಳಿಗೆ ಜಾಗವನ್ನು ಕಲ್ಪಿಸಿ, ಹೊಸಬಸ್ ನಿಲ್ದಾಣವನ್ನು ಅಭಿವೃದ್ಧಿ ಮಾಡಿ ಎ-ಗ್ರೇಡ್ ಮಾಡುವುದು ಸೂಕ್ತ, ಆಸ್ಪತ್ರೆ ಮತ್ತು ಬಸ್‌ನಿಲ್ದಾಣಕ್ಕೆ ಕೆರೆಯ ಜಾಗವು ಸೂಕ್ತವಲ್ಲ, ಅಲ್ಲದೆ ಹೈಕೋರ್ಟ್ ತೀರ್ಮಾನದಂತೆ ಕೆರೆಗಳನ್ನು ಉಳಿಸಿ, ಬೆಳೆಸಲು ಸರ್ಕಾರವು

ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಇದರ ವಿರುದ್ದವಾಗಿ ನಡೆದುಕೊಳ್ಳುವುದು ಸೂಕ್ತವಲ್ಲ, ಸರ್ವೆ ನಂ.25ರ ಕೆ.ಆರ್.ಎಸ್. ಲೋಕ ಅಥವಾ ತೋಟಗಾರಿಕೆ ಇಲಾಖೆಯ ಜಾಗದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲು ಸೂಕ್ತಸ್ಥಳವಾಗಿರುತ್ತದೆ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಹಾಗೂ ನಾಗರಕೆರೆಯಲ್ಲಿ ಬಸ್ ನಿಲ್ದಾಣ ಹಾಗೂ ಆಸ್ಪತ್ರೆ ನಿರ್ಮಾಣಕ್ಕೆ ತಮ್ಮ ವಿರೋಧವಿದೆ ಎಂಬುದಾಗಿ ಸಲ್ಲಿಸಿರುವ ಮನವಿಯನ್ನು ನಡವಳಿಕೆಯ ಪುಸ್ತಕದಲ್ಲಿ ಚಿಟಾಕಾಯಿಸಲಾಯಿತು.

ನಾಗರಕೆರೆಯಲ್ಲಿ ಆಸ್ಪತ್ರೆ ಮತ್ತು ಬಸ್ ನಿಲ್ದಾಣ ನಿರ್ಮಾಣಕ್ಕೆ ಶ್ರೀಮತಿ ಎನ್.ಮಂಜುಳ ಹಾಗೂ ಶ್ರೀಮತಿ ಅನುಸೂಯ, ಸದಸ್ಯರವರು ವಿರೋಧವನ್ನು ವ್ಯಕ್ತಪಡಿಸಿದರು.

ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಎಲ್ಲರ ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂಬುದಾಗಿ ತಿಳಿಸಿದರು.

**ವಿಷಯ ಸಂಖ್ಯೆ:2**

ದೊಡ್ಡಬಳ್ಳಾಪುರ ನಗರದಲ್ಲಿ ಜನಸಾಂದ್ರತೆ ಹೆಚ್ಚಾಗುತ್ತಿದ್ದು ಈಗ ಇರುವಂತಹ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯು ಚಿಕ್ಕದಾಗಿದ್ದು ರೋಗಿಗಳ ಚಿಕಿತ್ಸೆಗಾಗಿ ಅನುಕೂಲವಾಗುವಂತೆ ನಗರ ವ್ಯಾಪ್ತಿಯಲ್ಲಿ ಮತ್ತೊಂದು ವಿನೂತನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ನಿರ್ಮಾಣ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ವಿಷಯ ಸಂಖ್ಯೆ.1ರಲ್ಲಿ ಚರ್ಚಿಸಿರುವಂತೆ ಸದರಿ ವಿಷಯಕ್ಕೂ ಅನ್ವಯವಾಗುತ್ತದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:3**

ದೊಡ್ಡಬಳ್ಳಾಪುರ ನಗರದಲ್ಲಿಹೆಚ್ಚುತ್ತಿರುವ ಜನಸಾಂದ್ರತೆಗೆ ಈಗ ಇರುವಂತಹ ನಗರಸಭೆಯ ಸಿಬ್ಬಂದಿಯವರಿಂದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕಷ್ಟವಾಗುತ್ತಿರುವುದರಿಂದ ಇತರ ಗ್ರಾಮ ಪಂಚಾಯಿತಿ ಪ್ರದೇಶಗಳನ್ನು ಸೇರಿಸಿಕೊಂಡು ಈಗ ಇರುವಂತಹ ದೊಡ್ಡಬಳ್ಳಾಪುರ ನಗರಸಭೆಯ ಗ್ರೇಡ್ 2 ನಲ್ಲಿ ಬಿ ಸ್ಥಾನದ ಬದಲಾಗಿ ಗ್ರೇಡ್ 1ರ ನಗರಸಭೆಯನ್ನಾಗಿ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಶ್ರೀ ತ.ನ.ಪ್ರಭುದೇವ್, ಸದಸ್ಯರು ಮಾತನಾಡಿ, ಜನಸಂಖ್ಯೆಯ ಆಧಾರದ ಮೇಲೆ ಗ್ರೇಡ್-1 ನಗರಸಭೆಯನ್ನಾಗಿ ಮಾಡಲಾಗುತ್ತದೆ. ಈ ಹಿಂದೆ ಪುರಸಭೆಯಿಂದ ನಗರಸಭೆಗೆ ಪರಿವರ್ತನೆ ಮಾಡಿದ್ದು, ಇದೂವರೆವಿಗೂ ಮೂಲ ಭೂತ ಸೌಕರ್ಯಗಳನ್ನು ಜನಸಾಮಾನ್ಯರಿಗೆ ಕಲ್ಪಿಸಿಕೊಡಲು ಸಾಧ್ಯಾವಾಗುತ್ತಿಲ್ಲ, ಗೆಜೆಟ್ ಪ್ರಕಾರ ಗಡಿ ವಿಸ್ತೀರ್ಣದವರೆವಿಗೂ ಸರ್ವೆ ನಂಬರು ಜಾಗವಿದ್ದು, ಗಡಿ ಪ್ರದೇಶಗಳನ್ನು ಭದ್ರಪಡಿಸಿ, ಸರ್ವೆ ನಂಬರು ಸ್ವತ್ತುಗಳಿಂದ ತೆರಿಗೆ ವಸೂಲಿಯಲ್ಲಿ ಪ್ರಗತಿ ಸಾಧಿಸಿ, ನಂತರ ಗಡಿಪ್ರದೇಶವನ್ನು ವಿಸ್ತರಿಸವುದು ಸೂಕ್ತ ಎಂಬ ಅಭಿಪ್ರಾಯವನ್ನು ಸಭೆಗೆ ಮಂಡಿಸಿದರು. ನಂತರ ಎಲ್ಲಾ ಸದಸ್ಯರು ನಗರಸಭೆಯನ್ನು ಗ್ರೇಡ್-1 ನಗರಸಭೆಯನ್ನಾಗಿ ಮಾರ್ಪಡಿಸಲು ಅಭಿಪ್ರಾಯವನ್ನು ವ್ಯಕ್ತಪಡಿಸಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಕರಡು ನಕ್ಷೆಯನ್ನು ತಯಾರಿಸಿ ಇತರೆ ಭಾಗಗಳನ್ನು ಸೇರಿಸಿ ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:4</u>**

ದಿನಗೂಲಿ ನೌಕರರ ವೇತನವನ್ನು ಪರಿಷ್ಕರಿಸುವಂತೆ ನೌಕರರು ಮನವಿಯನ್ನು ನೀಡಿದ್ದು ಅದರಂತೆ ಪೌರಾಡಳಿತ ನಿರ್ದೇಶನಾಲಯ ಪತ್ರದ ಸಂಖ್ಯೆ ಪೌನಿ/ಕಾಕೊ/4/03–04 ದಿನಾಂಕ 15–01–2005ರ ರೀತಿಯ ಕನಿಷ್ಟ ವೇತನವನ್ನು ನಿಗಧಿ ಪಡಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:4</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಸರ್ಕಾರದ ಸುತ್ತೋಲೆಯಂತೆ ಮತ್ತು ಪೌರಾಡಳಿತ ನಿರ್ದೇಶನಾಲಯ ಪತ್ರದ ಸಂಖ್ಯೆ ಪೌನಿ/ಕಾಕೊ/4/03–04 ದಿನಾಂಕ 15–01–2005ರ ರೀತ್ಯಾ ದಿನಗೂಲಿ ನೌಕರರಿಗೆ ಆಯಾ ಹುದ್ದೆಗೆ ಅನ್ವಯಿಸುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕನಿಷ್ಠ ವೇತನ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿದ್ದು, ವ್ಯತ್ಯಾಸವಾಗುವ ಬಾಬ್ತು ವಿವರವನ್ನು ಮುಂದಿನ ಸಭೆಯಲ್ಲಿ ಅಧಿಕೃತವಾಗಿ ಮಂಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

---

**ಸಹಿ:–**
**(ಜಿ.ರಾಮಕೃಷ್ಣ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**“ ನಕಲು ಪ್ರತಿ ”**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**